ಶ್ರೀ ವೈ. ಬಿ. ಪಾಟೀಲ್.—ಯುನಿವರ್ಸಿಟಿ ಕಾನ್‌ಸ್ಟಿಟ್ಯುಯೆಂಟ್ ಕಾಲೇಜುಗಳಲ್ಲಿ ಕೊಡ ತಕ್ಕ ನಂಬಳದ ಸ್ಕೇಲುಗಳನ್ನು ನರ್ಕಾರಿ ಕಾಲೇಜುಗಳಲ್ಲೂ ಒಕೆ ಕೊಡಬಾರದು ?

ಶ್ರೀ ಕೆ. ವಿ. ಶಂಕರಗೌಡ.—ಸರಕಾರಿ ಕಾಲೇಜುಗಳಿಗೆ ಅದನ್ನು ಕೊಡುವುದಕ್ಕಾಗುವುದಿಲ್ಲ ಎಂದು ಅದಾಗಲೇ ತೀರ್ಮಾನವಾಗಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಏತಕ್ಕೆ ಇಂಥ ಭೇಧಭಾವನೆಗಳನ್ನು ಮಾಡುತ್ತಿದ್ದೀರಿ ? ನೀವೇ ಆ ಯು. ಜಿ. ಸಿ. ಅವರಿಗೆ ನಲಹೆ ಮಾಡಿ ಎಲ್ಲರಿಗೂ ಒಂದೇ ಮಟ್ಟದ ಸ್ಕೇಲುಗಳು ಇರು ವಂತೆ ಏಕೆ ಮಾಡಬಾರದು ? ಅಲ್ಲಿ ಈ ರಿವನ ಕೆಲಸಮಾಡತಕ್ಕವರು ಯಾರೂ ನಮಾಧಾನದಿಂದ ಕೆಲಸ ಮಾಡುತ್ತಿಲ್ಲ. ಅಲ್ಲಿ ಅಸಮಾಧಾನವುಂಟು ತುಳಿಕುತ್ತದೆ. ಏಕೆ ಈ ವ್ಯತ್ಯಾಸವನ್ನು ತೊಡೆದು ಹಾಕಬಾರದು ?

ಶ್ರೀ ಕೆ. ವಿ. ಶಂಕರಗೌಡ.—ಈ ಸ್ಕೇಲುಗಳನ್ನೂ ಆ ಯು. ಜಿ. ಸಿ. ಅವರೇ ನಲಹೆ ಮಾಡಿದ್ದು ಅಲ್ಲಿ ಸ್ನಾತಕೋತ್ತರ ಪಾಠಗಳನ್ನು ನಡೆಸಲಾಗುತ್ತದೆ. ಆದರೆ ಇಲ್ಲಿ ಕಾಲೇಜುಗಳಲ್ಲಿ ಅಂಡರ್ ಗ್ರಾಜುಯೇಟ್ ಗಳಿಗೆ ಮಾತ್ರ ಪಾಠಗಳನ್ನು ಹೇಳಲಾಗುತ್ತಿದೆ. ಆದ್ದರಿಂದ ಇವರಿಗೆ ಆ ಸ್ಕೇಲು ಗಳನ್ನು ಕೊಡುವುದಕ್ಕಾಗುವುದಿಲ್ಲವೆಂದು ಅವರೇ ಹೇಳಿದ್ದಾರೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಸ್ನಾತಕೋತ್ತರ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಅಧ್ಯಾಪಕರುಗಳು ಅಂಡರ್ ಗ್ರಾಜುಯೇಟ್ ತರಗತಿಗಳಿಗೆ ಬಂದು ಪಾಠ ಹೇಳತಕ್ಕಂಥ ವಿಧಾಯಕ ಮಾಡಿದ್ದೀರಿ. ಸರ್ಕಾರದ ಕಾಲೇಜುಗಳಲ್ಲಿರತಕ್ಕ ಅಧ್ಯಾಪಕರೂ ಸಹ ಅಲ್ಲಿ ಹೋಗಿ ಪಾಠ ಹೇಳ ತಕ್ಕಂಥ ವಿಧಾಯಕಮಾಡಿದ್ದೀರಿ. ಈಗ ಇಬ್ಬರ ಕೆಲಸಗಳೂ ಒಂದೇ ರೀತಿಯಾಗಿರುವುದರಿಂದ ಒಂದೇ ಅರ್ಹತೆಯೂ ಇರುವುದೆಂದು ನಂಬಳ ಸಾರಿಗೆಯಲ್ಲಿ ಏಕೆ ವ್ಯತ್ಯಾಸವಮಾಡುತ್ತೀರಿ ?

ಶ್ರೀ ಕೆ. ವಿ. ಶಂಕರಗೌಡ.—ಅಂಡರ್ ಗ್ರಾಜುಯೇಟ್ ವಿಭಾಗದಲ್ಲಿ ಕೆಲಸದಲ್ಲಿರುವವರಲ್ಲಿ ಕೆಲವರು ಮಾತ್ರ ಸ್ನಾತಕೋತ್ತರ ಶಿಕ್ಷಣದಲ್ಲಿಯೂ ಭಾಗವಹಿಸುತ್ತಾರೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಅವರಿಗಾದರೂ ಸ್ನಾತಕೋತ್ತರ ಶಿಕ್ಷಣದಲ್ಲಿ ಕೆಲಸಮಾಡುವಾಗ ಈ ರೀತಿ ನಂಬಳ ಸಾರಿಗೆಯನ್ನು ಕೊಡುವುದಕ್ಕಾಗುವುದಿಲ್ಲವೇ ? ಆ ರೀತಿ ಕೊಡುವುದಕ್ಕೆ ಏನು ತೊಂದರೆ ?

ಶ್ರೀ ಕೆ. ವಿ. ಶಂಕರಗೌಡ.—ಅಂತಹವರಿಗೆ ಬೇಕಾದರೆ ಅರೊಯುನ್ಸ್ ಕೊಡಬಹುದು.

ಶ್ರೀ ಎಂ. ಟಿ. ಶ್ರೀಕಂಠಯ್ಯ.—ಪೋಸ್ಟ್ ಗ್ರಾಜುಯೇಟ್ ಕೋರ್ಸಿಗೆ ಪಾಠ ಹೇಳುವ ಉಪಾಧ್ಯಾಯರಿಗೆ ಒಂದು ರೀತಿಯ ವೇತನವನ್ನು ಕೊಡುತ್ತಿದ್ದೀರಿ. ಈಗ ಮಹಾರಾಣಿ ಕಾಲೇಜಿನಲ್ಲಿ ಪೋಸ್ಟ್ ಗ್ರಾಜುಯೇಟ್ ಕೋರ್ಸಿಗೆ ಪಾಠ ಹೇಳಲು ಯಾರನ್ನೋ ನೇಮಿಸುತ್ತೀರಿ. ಆ ರೀತಿ ವೇತನ ಕೊಡದೇ ಇದ್ದರೆ, ಅದಕ್ಕೆ ಈಗ ಏತಕ್ಕೆ ಪರ್ಮಿಷನ್ ಕೊಡುತ್ತೀರಿ ?

ಶ್ರೀ ಕೆ. ವಿ. ಶಂಕರಗೌಡ.—ಮಹಾರಾಣಿ ಕಾಲೇಜಿನಲ್ಲಿ ಪೋಸ್ಟ್ ಗ್ರಾಜುಯೇಟ್ ಕೋರ್ಸ್ ನ್ನು ಪ್ರಾರಂಭಪಮಾಡುವ ಸಂಭವವೇ ಇಲ್ಲವೆಂದು ನನಗೆ ಕಾಣುತ್ತದೆ.

Rules regarding Disbursement of Salary

44. Sri Y. S. PATIL (Graduates' Constituency):—

Will the Minister for Agriculture and Education be pleased to state :—

whether the Government have any proposal before them to frame rules providing for immediate redressal of grievances of the teachers on account of harassment in aided institutions even after the introduction of system of disbursement of salaries through cheques ?

A.—Sri K. V. SHANKARA GOWDA (Minister for Agriculture and Education).—

No. Existing rules are considered sufficient to protect the interest of teachers.

ಶ್ರೀ ವೈ. ಎಸ್. ಪಾಟೀರ್.—ಖಾಸಗೀ ಶಿಕ್ಷಣ ಸಂಸ್ಥೆಗಳಲ್ಲಿರುವ ಶಿಕ್ಷಕರಿಗೆ ಬರುತ್ತಿರುವ ಸಂಬಳದಲ್ಲಿ ಶೇಕಡ 25, 30, 50ರಷ್ಟು ಇನ್ನೂ ಕೊಟ್ಟಿಲ್ಲವೆಂಬುದಾಗಿ ಶಿಕ್ಷಕರಿಂದ ದೂರು ಬಂದಿವೆಯೇ?

ಶ್ರೀ ಕೆ. ವಿ. ಶಂಕರಗೌಡ.—ಕೆಲವು ದೂರುಗಳು ಬಂದಿವೆ. ಅವುಗಳ ವಿಚಾರದಲ್ಲಿ ಸೂಕ್ತ ಕ್ರಮವನ್ನು ತೆಗದುಕೊಳ್ಳಲಾಗಿದೆ.

ಶ್ರೀ ವೈ. ಎಸ್. ಪಾಟೀರ್.—ಖಾಸಗೀ ಶಾಲೆಗಳಲ್ಲಿ 3-4 ವರ್ಷಗಳವರೆಗೆ ದುಡಿದವರಿಗೆ ಇನ್ನೂ ಸಂಬಳ ಕೊಡದೆ ಇರುವಾಗ ಶಾಲೆ ಬಿಟ್ಟು ಹೋಗಿ ಎಂಬುದಾಗಿ ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಅವರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಕೆ. ವಿ. ಶಂಕರಗೌಡ.—ಒಕಾಏಕಿ ಶಿಕ್ಷಕರನ್ನು ಶಾಲೆ ಬಿಟ್ಟು ಹೋಗಿ ಎಂಬುದಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಅವರನ್ನು ತೆಗೆದುಹಾಕುವುದಕ್ಕೆ ನಿಯಮಗಳುಂಟು. ಅವನ್ನು ಅನುಸರಿಸಬೇಕು. ಅವರನ್ನು ತೆಗೆದುಹಾಕುವುದು ಅಷ್ಟು ಸುಲಭದ ಕೆಲಸವಲ್ಲ.

ಶ್ರೀ ವೈ. ಎಸ್. ಪಾಟೀರ್.—ಹೊಸಪೇಟೆ ಮುನಿಸಿಪಾಲಿಟಿಯವರು ನಡೆಸುವಂಥ ಸೆಕೆಂಡರಿ ಸ್ಕೂಲಿನಲ್ಲಿ ಕೆಲಸಮಾಡುವ 2-3 ಜನ ಶಿಕ್ಷಕರಿಗೆ ಅಲ್ಲಿನ ಮುನಿಸಿಪಲ್ ಕಮಿಷನರ್ ಅವರು ನಿಮ್ಮನ್ನು ಸರ್ವಿಸಿನಿಂದ ಜೂನ್ ತಿಂಗಳಿಂದ ತೆಗೆದುಹಾಕುತ್ತೇವೆ, ಆಮೇರೆ ನೀವು ಬೇರೆ ಹೇಗೆ ಇಲ್ಲವೆಂದು ಅವರನ್ನು ಸರ್ವಿಸಿನಿಂದ ತೆಗೆದುಹಾಕಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ವಿ. ಶಂಕರಗೌಡ.—ಅವರನ್ನು ಯಾವ ಕಾರಣಕ್ಕಾಗಿ ತೆಗೆದುಹಾಕಿದ್ದಾರೆಂಬುದರ ಬಗ್ಗೆ ನನ್ನ ಮುಂದೆ ಮಾಹಿತಿ ಇಲ್ಲ. ಅದರ ಬಗ್ಗೆ ಬೇರೆ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದರೆ ಉತ್ತರ ಹೇಳುತ್ತೇನೆ.

Popularising Kannada Typewriters

45. Sri M. C. NARASIMHAN (Legislative Assembly Constituency).—

Will the Minister for Agriculture and Education be pleased to state :—

(*a*) whether representations were/have been made by persons concerned in commercial education that encouragement be given for popularising Kannada Typewriters ;

(*b*) the steps taken to popularise the use of Kannada Typewriters ?

A.—Sri K. V. SHANKARA GOWDA (Minister for Agriculture and Education).—

(*a*) No.

(*b*) The following are the steps taken for popularising Kannada Typewriter :

(*i*) Mysore State Secondary Education and Examinations Board conducted the first examination in Kannada Typewriting in